## ಸಂಪಾದಕೀಯ

# ಭಗವದ್ರಹಸ್ಯ

(ಭಾಗ ೧ – ಜಗತ್ತಿನ ರಹಸ್ಯ)

### ಜಗತ್ತಿನ ರಹಸ್ಯ – ಕೆಲವು ಪಾಶ್ಚಾತ್ಯ ಪರಿಕಲ್ಪನೆಗಳು

**ನಾ**ವು ವಾಸಿಸುತ್ತಿರುವ ಜಗತ್ತಿನ ಬಗ್ಗೆ ನಮಗೇನು ಗೊತ್ತಿದೆ? ಈ ಪ್ರಶ್ನೆ ಎಂಥವರನ್ನೂ ತಬ್ಬಿಬ್ಬು ಮಾಡಬಹುದು. ಜಗತ್ತಿನ ಬಗೆಗಿನ ನಮ್ಮ ಅಧ್ಯಯನದಲ್ಲಿ ಮೊದಲು ಉತ್ತರಿಸಬೇಕಾದ ಪ್ರಶ್ನೆ: **ಜಗತ್ತಿನ ರಚನೆಯ ಸ್ವರೂಪ ಏನು?** ಇಂಗ್ಲಿಷಿನಲ್ಲಿ ಎರಡು ಪದಗಳಿವೆ. ಸುಸಂಬದ್ಧ ಜಗತ್ತು (cosmos) ಅಥವಾ ಯಾವ ಪೂರ್ವನಿರ್ಧಾರಿತ ರಚನೆಯೂ ಇಲ್ಲದ ಒಂದು ಕಂತೆ (chaos) – ಹೀಗೆ ಪಾಶ್ಚಾತ್ಯ ಚಿಂತನೆಯಲ್ಲಿ ಜಗತ್ತಿನ ಬಗ್ಗೆ ಎರಡು ಅಭಿಪ್ರಾಯಗಳಿದ್ದವು. ಧಾರ್ಮಿಕ ಶ್ರದ್ಧಾಳುಗಳಿಗೆ ಈ ಜಗತ್ತು ಸುಸಜ್ಜಿತವಾಗಿಯೇ ಕಂಡುಬರುತ್ತಿತ್ತು. ಅದಕ್ಕೆ ಕಾರಣ ಅದರ ಹಿಂದೆ ಭಗವಂತನ ಶಕ್ತಿಯಿದೆ ಎಂದು ಅವರು ನಂಬುತ್ತಿದ್ದರು.

ಎರಡನೆಯ ಮುಖ್ಯ ಪ್ರಶ್ನೆಯೆಂದರೆ, **ಜಗತ್ತಿನಲ್ಲಿ ಮಾನವನ ಸ್ಥಾನ ಏನು?** ಹಿಂದಿನಿಂದಲೂ ಪಾಶ್ಚಾತ್ಯ ಧಾರ್ಮಿಕ ಚಿಂತನೆಯು ಮಾನವನು ಸೃಷ್ಟಿಯ ಒಡೆಯ ಎಂದೇ ಹೇಳುತ್ತ ಬಂದಿತ್ತು. ಅದು ಅರಿಸ್ಟಾಟಲ್‌ನ ಪ್ರಾಚೀನ ವಿಶ್ವಶಾಸ್ತ್ರದ ಕಡಿವಾಣದಿಂದ ತಪ್ಪಿಸಿಕೊಳ್ಳಲಾಗದೆ, ಮೇಲಿನ ತನ್ನ ಧೋರಣೆಗೆ ಸರಿಹೊಂದುವಂತೆ, ಭೂಮಿಯೇ ವಿಶ್ವದ ಕೇಂದ್ರವೆಂದು ನಂಬಿತ್ತು. ಆದರೆ ಸ್ವತಂತ್ರ ಚಿಂತಕರ ಚಿಂತನೆಯೇ ಬೇರೆಯಾಗಿತ್ತು. ಮಾಂಟೇನ್ (Montaigne) ಎಂಬ ಚಿಂತಕ, ಮಾನವನು ತಾನು ಸೃಷ್ಟಿಯ ಒಡೆಯನೆಂದುಕೊಂಡರೆ ತನ್ನನ್ನು ತಾನೇ ಮೋಸಗೊಳಿಸಿಕೊಂಡಂತೆ ಎನ್ನುತ್ತಾನೆ. ಮಾನವನೆಂಬ ಹುಲು ಪ್ರಾಣಿಯು ಗ್ರಹತಾರೆಗಳ ಚಿರಂತನ ಜ್ಯೋತಿ, ಅನಂತ ಕಡಲಿನ ಭಯಾನಕ ಓಘ – ಇವೆಲ್ಲಕ್ಕೂ ತಾನು ಒಡೆಯನೆಂದೂ, ಅವೆಲ್ಲವೂ ತನಗೋಸ್ಕರವಾಗಿ ಇರುವುವೆಂದೂ ಭಾವಿಸುವುದು ನ್ಯಾಯವೇ ಎಂದು ಕೇಳುತ್ತಾನೆ. ತನ್ನನ್ನು ತಾನೇ ನಿಯಂತ್ರಿಸಿಕೊಳ್ಳಲಾಗದ ದುರ್ಬಲ ವ್ಯಕ್ತಿಯೊಬ್ಬ ತನ್ನನ್ನು ಸೃಷ್ಟಿಯ ಚಕ್ರವರ್ತಿಯೆಂದು ಕರೆದುಕೊಳ್ಳಲು ಸಾಧ್ಯವೇ ಎಂದು ಅಣಕವಾಡುತ್ತಾನೆ.

> "ಪ್ರಪಂಚವನ್ನು ತಿಳಿಯದವನು, ತಾನೆಲ್ಲಿರುವೆನೆಂದೂ ತಿಳಿದಿರುವುದಿಲ್ಲ. ಪ್ರಪಂಚದ ಅಸ್ತಿತ್ವದ ಉದ್ದೇಶವನ್ನೇ ಅರಿಯದವನು ತಾನು ಯಾರು ಎಂಬುದನ್ನೂ ತಿಳಿದಿರುವುದಿಲ್ಲ, ಅಲ್ಲದೆ ಪ್ರಪಂಚದ ಬಗ್ಗೆಯೂ ಅರಿತಿರುವುದಿಲ್ಲ."
>
> –ಮಾರ್ಕಸ್ ಅರೆಲಿಯಸ್

ವಿಜ್ಞಾನದ ಮುನ್ನಡೆ, ಮಾಂಟೇನ್ ಮಹಾಶಯನ ಮೇಲಿನ ಅಣಕಕ್ಕೆ ಪುರಾವೆಯನ್ನು ಕೊಟ್ಟಿತು. ಕೋಪರ್ನಿಕಸ್‌ನ ವಿಶ್ವದ ಕಲ್ಪನೆ, ವಿಶ್ವರಚನೆಯಲ್ಲಿ ಮಾನವನ ಸಾರ್ವಭೌಮತ್ವವನ್ನು ನುಚ್ಚುನೂರು ಮಾಡಿತು. ಸೂರ್ಯನೇ ಕೇಂದ್ರ, ಅದರ ಸುತ್ತಲೂ ಭೂಮಿ ಸುತ್ತುತ್ತಿದೆ ಎಂಬ ಆತನ ಸಿದ್ಧಾಂತ, ಕೇವಲ ಭೌತಶಾಸ್ತ್ರದಲ್ಲಿ ಮಾತ್ರವಲ್ಲ, ಆಗಿನ ಕಾಲದ ತತ್ತ್ವಚಿಂತನೆಯಲ್ಲಿಯೂ, ಧಾರ್ಮಿಕ ಶ್ರದ್ಧೆಯಲ್ಲಿಯೂ ಮಹಾನ್ ಅಲ್ಲೋಲಕಲ್ಲೋಲವನ್ನೇ ಎಬ್ಬಿಸಿತು. ವಿಜ್ಞಾನದ ಪಾಲಿಗಂತೂ, ಮಾನವನ ನಿವಾಸವಾದ ಈ ಭೂಮಿ, ವಿಶ್ವದ ಎಲ್ಲೋ ಮೂಲೆಯಲ್ಲಿರುವ ಒಂದು ಧೂಳಿನ ಕಣದ ಸ್ಥಾನವನ್ನು ಪಡೆಯಿತು.

ಮೂರನೆಯ ಪ್ರಶ್ನೆ: **ಜಗತ್ತು ನಿತ್ಯವೇ?** ಜಗತ್ತು ತನಗೆ ತಾನೇ ನಿತ್ಯವಾದರೆ, ಜಗತ್ತಿನ ಕರ್ತಾರನಾದ ಭಗವಂತನನ್ನು ಕಲ್ಪಿಸಿಕೊಳ್ಳುವ ಆವಶ್ಯಕತೆಯೇ ಇಲ್ಲ ಎಂದು ಕೆಲವರ ವಾದ. ಅವರ ಪ್ರಕಾರ, ಸೃಷ್ಟಿಗೆ ಸಂಬಂಧಪಟ್ಟ ಹಾಗೆಯೇ ಭಗವಂತನ ಅಸ್ತಿತ್ವವನ್ನು ಮಾನ್ಯ ಮಾಡಬೇಕೇ ಹೊರತು ಬೇರೆ ದಾರಿಯಿಲ್ಲ. ಆದ್ದರಿಂದ ಜಗತ್ತು ನಿತ್ಯವೆಂದು ಹೇಳುವುದು ಭಗವಂತನ ಅಸ್ತಿತ್ವವನ್ನು ಅಲ್ಲಗಳೆದಂತೆ ಎಂದು ಅವರ ಅಭಿಪ್ರಾಯ. ಮಧ್ಯಕಾಲೀನ ಯುಗದ ಕ್ರೈಸ್ತ ಮತೀಯರ ಅಭಿಪ್ರಾಯವೂ ಅದೇ ಆಗಿತ್ತು. ಆದ್ದರಿಂದಲೇ, ಅನಂತ ಅವಕಾಶದ (space) ವಿಶ್ವವೊಂದರ ಸಿದ್ಧಾಂತವನ್ನು ಮುಂದಿಟ್ಟ ಕೊಪರ್‌ನಿಕಸ್ ಮತ್ತು ಗೆಲಿಲಿಯೋ ನಿಂದೆ ಮತ್ತು ಶಿಕ್ಷೆಗೆ ಒಳಗಾಗಬೇಕಾಯಿತು. ಆದರೆ ನಂತರ ಪರಿಸ್ಥಿತಿ ಸುಧಾರಿಸಿತು. ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಎಡ್ಡಿಂಗ್‌ಟನ್ ಮತ್ತು ಜೀನ್ಸ್ ಮುಂತಾದ ವಿಜ್ಞಾನಿಗಳು ಸೃಷ್ಟಿಯ ನಿರಂತರತೆಯನ್ನೂ, ಅದರ ಹಿಂದಿನ ವಿಶ್ವಮಾನಸ ಶಕ್ತಿಯನ್ನೂ ಪ್ರತಿಪಾದಿಸಿದಾಗ, ಅದನ್ನು ಉದಾರವಾಗಿ ಸ್ವೀಕರಿಸಲಾಯಿತು. ಇದಕ್ಕೆ ಕಾರಣ, ಕಾಲ ಕಳೆದಂತೆಲ್ಲ, ನಿಸರ್ಗದ ಬಗೆಗಿನ ನಮ್ಮ ಆಲೋಚನಾ ಲಹರಿ ಹೆಚ್ಚು ಹೆಚ್ಚು ವಸ್ತುನಿಷ್ಠವಾಗುತ್ತಿರುವುದು.

ನಾಲ್ಕನೆಯ ಪ್ರಶ್ನೆ: **ಜಗತ್ತು ಅನಂತವೋ ಸಾಂತವೋ? (ಜಗತ್ತು ಯಾವಾಗಲೂ ಇರುವಂಥದ್ದೋ ಇಲ್ಲ ಅದಕ್ಕೆ ನಾಶವಿದೆಯೋ?)** ಜಗತ್ತಿನ ನಿತ್ಯತೆಯ ಬಗ್ಗೆ ಯಾವ ಸಮಸ್ಯೆ ಧಾರ್ಮಿಕರನ್ನು ಕಾಡಿತೋ ಅದೇ ಸಮಸ್ಯೆ, ಜಗತ್ತಿನ ಅನಂತತೆಯ ಬಗ್ಗೆಯೂ ಕಾಡಿತು. ಜಗತ್ತು ಅನಂತವಾಗಿದ್ದರೆ, ಅದರಾಚೆ ಇರುವ ಸ್ವತಂತ್ರನಾದ ಭಗವಂತನ ಅಸ್ತಿತ್ವಕ್ಕೆ ಧಕ್ಕೆ ಬರುತ್ತದೆ. ಮತ್ತು, ಭಗವಂತನು ಸೃಷ್ಟಿಕರ್ತನೆಂಬುದನ್ನೂ ಒಪ್ಪಲಾಗದು. ಜಗತ್ತು ಸಾಂತ (ಅಂತ್ಯವುಳ್ಳದ್ದು) ಆಗಿದ್ದರೇನೇ ಭಗವಂತನು ಅದರ ಹೊರಗಿದ್ದು, ಅದನ್ನು ಸೃಷ್ಟಿಸಲು ಸಾಧ್ಯವಾಗುವುದು? ದೇವರು ಮತ್ತು ಅವನ ಸೃಷ್ಟಿ ಬೇರೆ ಬೇರೆ ಎನ್ನುವ ನಂಬಿಕೆಯ ಮೇಲೆಯೇ ನಿಂತಿರುವ ಕ್ರೈಸ್ತ ಮತಕ್ಕೆ ಜಗತ್ತು ಅನಂತವೆಂಬ ಸಿದ್ಧಾಂತವನ್ನು ಒಪ್ಪಲಾಗದು. ಆಧುನಿಕ ಕಾಲದಲ್ಲಿ ಐನ್‌ಸ್ಟೈನ್, ಅಂತ್ಯವಿರುವ ಆದರೆ ಯಾವ ಸೀಮಿತತೆಗಳೂ ಇಲ್ಲದೆ ಉಬ್ಬುವ ಅಥವಾ ವಿಕಾಸವಾಗುವ ಪ್ರಪಂಚವನ್ನು ಕಲ್ಪಿಸಿದರು. ಇದು ಒಂದು ಸಾಪೇಕ್ಷ ಭಾವನೆಯಾಗಿದ್ದು, ನಿತ್ಯ ಸಾಂತತೆ ಅಥವಾ ನಿತ್ಯ ಅನಂತತೆಗೆ ವಿರುದ್ಧವಾದ ಅಭಿಪ್ರಾಯವಾಗಿದೆ.

ಐದನೆಯ ಪ್ರಶ್ನೆ: **ಜಗತ್ತು ಒಂದೇ ಇರುವುದೋ ಅಥವಾ ಹಲವು ಜಗತ್ತುಗಳು ಇರುವವೋ?** ಈ ವಿಷಯದಲ್ಲಿ ಬಹುತೇಕ ಪ್ರಾಚೀನ ತತ್ತ್ವಶಾಸ್ತ್ರಜ್ಞರ ಉತ್ತರ, ಒಂದೇ ಜಗತ್ತು ಇರುವುದು ಎಂದೇ. ಯಾವುದು ಸೃಷ್ಟಿಯಾಗಿದೆಯೋ ಅದನ್ನು ನಾವು ಜಗತ್ತು ಎನ್ನುತ್ತೇವೆ. ಯಾವುದೋ

ಒಂದು ಭಾವನೆಯಿಂದ ಸೃಷ್ಟಿ ಆಗಿರಬೇಕು. ಆ ಒಂದು ಭಾವನೆ ಒಂದೇ ರಚನೆಯುಳ್ಳ ಜಗತ್ತನ್ನು ಸೃಷ್ಟಿಸಲು ಸಾಧ್ಯವೇ ಹೊರತು ಎರಡು ಬಗೆಯ ಜಗತ್ತುಗಳನ್ನಲ್ಲ – ಇದು ಪ್ರಸಿದ್ಧ ಗ್ರೀಕ್ ತತ್ತ್ವಜ್ಞಾನಿ ಪ್ಲೇಟೋವಿನ ಸಮರ್ಥನೆ. ಅದೇ ರೀತಿ ಅರಿಸ್ಟಾಟಲನೂ ಸೃಷ್ಟಿಯು ದ್ರವ್ಯದಿಂದ ಆಗಿರುವುದರಿಂದ, ಎಲ್ಲ ದ್ರವ್ಯವೂ ಒಂದೇ ಸೃಷ್ಟಿಯಲ್ಲಿ ಇರಬೇಕಾದ್ದರಿಂದ, ಇನ್ನೊಂದು ಸೃಷ್ಟಿಗೆ ಅವಕಾಶವೇ ಇಲ್ಲ ಎನ್ನುತ್ತಾನೆ.

ಆರನೆಯ ಪ್ರಶ್ನೆ: **ಜಗತ್ತು ಮತ್ತು ದೇವರ ನಡುವಣ ಸಂಬಂಧ ಏನು?** ಈ ಪ್ರಶ್ನೆಯು ಅತ್ಯಂತ ಮುಖ್ಯವಾದುದು. ಆದರೆ, **ದೇವರು ಯಾರು?** ಎಂಬ ಅಷ್ಟೇ ಪ್ರಮುಖವಾದ ಇನ್ನೊಂದು ಪ್ರಶ್ನೆಗೆ ಉತ್ತರ ಕಂಡುಕೊಳ್ಳದೆ, ಮೊದಲಿನ ಪ್ರಶ್ನೆಗೆ ಸರಿಯಾದ ಉತ್ತರ ದೊರಕಲಾರದು. ದೇವರ ಬಗೆಗಿನ ಎರಡು ಸಾಮಾನ್ಯ ಅಭಿಪ್ರಾಯಗಳೆಂದರೆ: ೧. ಜಗತ್ತಿನ ಹೊರಗೆ ಇರುವವನು ೨. ಜಗತ್ತಿನಲ್ಲಿ ಎಲ್ಲೆಡೆಯೂ ವ್ಯಾಪಿಸಿಕೊಂಡಿರುವವನು. ಮೊದಲನೆಯ ಅಭಿಪ್ರಾಯವು ಅತ್ಯಂತ ಪ್ರಸಿದ್ಧವಾಗಿದ್ದು, ಸಾಮಾನ್ಯ ಜನಕ್ಕೆ ಆಪ್ಯಾಯಮಾನವಾದುದು. ಇಲ್ಲಿ ದೇವರು ಒಬ್ಬ ವ್ಯಕ್ತಿಯ ರೂಪದಲ್ಲಿ ಕಂಡುಬರುತ್ತಾನೆ. ಪಾಶ್ಚಾತ್ಯ ಧಾರ್ಮಿಕ ಭಾವನೆಗಳು ಈ ಅಭಿಪ್ರಾಯದ ಆಧಾರದ ಮೇಲೆಯೇ ಬೆಳೆದಂತಹವು.

ಇನ್ನೊಂದು ಅಂಶವೆಂದರೆ, **ಸೃಷ್ಟಿಕರ್ತನ ರೂಪದಲ್ಲಿ ದೇವರ ಪಾತ್ರ**, ಇದು ಹಲವಾರು ಸಿದ್ಧಾಂತಗಳಿಗೆ ಎಡೆಮಾಡಿಕೊಟ್ಟಿರುವ ಸಂಕೀರ್ಣ ವಿಷಯ. ದೇವರು ಸೃಷ್ಟಿಕರ್ತನಾದರೆ, ಜಗತ್ತಿನಲ್ಲಿ ಕಂಡುಬರುವ ದುಃಖ ಮತ್ತು ಕೆಡುಕುಗಳಿಗೆ ಅವನೇ ಕಾರಣನೋ ಅಥವಾ ಅವನ ಸ್ವಭಾವದಲ್ಲೂ ಆ ಎಲ್ಲ ತ್ಯಾಜ್ಯಗಳು ಸೇರಿಕೊಂಡಿವೆಯೋ? – ಈ ಬಗೆಯ ಪ್ರಶ್ನೆಗಳು ಉದ್ಭವಿಸುತ್ತವೆ. ಈ ಪ್ರಶ್ನೆಯನ್ನು ಡೆಕಾರ್ಟ್, ಸ್ಪಿನೋಜಾ ಮತ್ತು ಹ್ಯೂಮ್ ಮೊದಲಾದ ತತ್ತ್ವಶಾಸ್ತ್ರಜ್ಞರು ಬಹಳ ಗಂಭೀರವಾಗಿ ಆಲೋಚಿಸಿದ್ದಾರೆ. ಅದೇ ರೀತಿ, ಅಗಸ್ಟಿನ್ ಮತ್ತು ಅಕ್ವಿನಸ್ ಮುಂತಾದ ದೈವಶಾಸ್ತ್ರಜ್ಞರು ವಿವಿಧ ವಾದಗಳನ್ನು ಮುಂದಿಟ್ಟಿದ್ದಾರೆ. ಅವರಲ್ಲಿ ಬಹುತೇಕರ ಪ್ರಯತ್ನವು, ಸೃಷ್ಟಿಕರ್ತನಾದ ಭಗವಂತನಲ್ಲಿ ದೋಷವನ್ನು ಕಾಣದೆ, ಆತನ ಸೃಷ್ಟಿಯಲ್ಲಿನ ಕೆಡುಕುಗಳಿಗೆ ವಿವರಣೆ ಕೊಡುವುದು ಹೇಗೆ ಎಂದೇ ಆಗಿತ್ತು. ಆದರೆ ಈ ಬಗೆಯ ಬೌದ್ಧಿಕ ಕಸರತ್ತಿನಲ್ಲಿ ಅವರು ಯಶಸ್ವಿಯಾದರೆಂದು ಹೇಳುವುದು ಕಷ್ಟ.

### ಜಗತ್ತು ಮತ್ತು ದೇವರು

ಇನ್ನು ಜಗತ್ತು ಮತ್ತು ದೇವರ ಸಂಬಂಧದ ಬಗ್ಗೆ ಪಾಶ್ಚಾತ್ಯ ಚಿಂತನಾ ಜಗತ್ತಿನಲ್ಲಿ ಮೂಡಿ ಬಂದ ಕೆಲವು ಪ್ರಮುಖ ಭಾವನೆಗಳ ಸಂಕ್ಷಿಪ್ತ ಪರಿಚಯ ಮಾಡಿಕೊಳ್ಳೋಣ.

೧. ಹಲವಾರು ಪ್ರಾಚೀನ ಗ್ರೀಕ್ ಚಿಂತಕರು ವಿಶ್ವವು ದೇಶತಃ ಅನಂತವೂ ಕಾಲತಃ ನಿತ್ಯವೂ ಎಂದು ನಂಬಿದ್ದರು. ಭೂಮಿ ಸಿಲಿಂಡರಿನ ಹಾಗಿದೆ ಎಂದು ಅನಾಕ್ಸಿಮ್ಯಾಂಡರ್ ಎಂಬ ಕ್ರಿಪೂ. ಏಳನೆಯ ಶತಮಾನದ ದಾರ್ಶನಿಕ ನಂಬಿದ್ದ. ಕ್ರಿಪೂ. ೫೦೦ ರ ಕಾಲದ ಪೈಥಾಗರಸ್, ಅದು ಗೋಲಕದಂತೆ ಇದೆ ಎಂದು ಅಭಿಪ್ರಾಯಪಟ್ಟಿದ್ದ. ಖಗೋಳ ಶಾಸ್ತ್ರದಲ್ಲಿ ದೇವರ ಕಲ್ಪನೆಯನ್ನು ತಂದವನೆಂದರೆ, ಅರಿಸ್ಟಾಟಲ್. ಹೊರಗಿನಿಂದ ದೇವರು ಜಗತ್ತನ್ನು ಆಳುವನೆಂದೂ, ಭೂಮಿಯು ಇಡೀ ವಿಶ್ವದ ಕೇಂದ್ರವಾಗಿದ್ದು, ಇದರ ಸುತ್ತ ವಿವಿಧ ಆಕಾರದ ವರ್ತುಲಗಳಲ್ಲಿ ಗ್ರಹತಾರೆಗಳು ಸುತ್ತುತ್ತವೆಯೆಂದೂ ಅವನು ಪ್ರತಿಪಾದಿಸಿದನು. ಆದರೆ ಈ ಎಲ್ಲ ತತ್ತ್ವಶಾಸ್ತ್ರಜ್ಞರೂ ಚಿಂತಕರೇ ಹೊರತು ಪ್ರಾಯೋಗಿಕ ವಿಜ್ಞಾನಿಗಳಾಗಿರಲಿಲ್ಲ.

೨. ಮುಂದಿನ ಯುಗ **ವಿಜ್ಞಾನಿಗಳ ಯುಗ**. ಮೂವರು ಹೆಸರಾಂತ ಖಗೋಳವಿಜ್ಞಾನಿಗಳು, ಜಗತ್ತು ಮತ್ತು ಜಗತ್ತಿನಲ್ಲಿ ಮಾನವನ ಸ್ಥಾನ– ಇವುಗಳನ್ನು ಕುರಿತ ಪ್ರಾಚೀನ ಕಲ್ಪನೆಗಳನ್ನು ಬುಡಮೇಲು ಮಾಡಿದರು. ಅವರೆಂದರೆ, ಕೋಪರ್ನಿಕಸ್, ಕೆಪ್ಲರ್ ಮತ್ತು ಗೆಲಿಲಿಯೋ. ಅರಿಸ್ಟಾಟಲನ ಬಳುವಳಿಯಾಗಿದ್ದು, ಹಲವಾರು ಶತಮಾನಗಳ ಕಾಲ ಕ್ರೈಸ್ತ ಚರ್ಚಿನ ಧಾರ್ಮಿಕ ನಂಬಿಕೆಗಳ ಅವಿಭಾಜ್ಯ ಅಂಗವಾಗಿದ್ದ ವಿಶ್ವಕಲ್ಪನೆಗೆ ಸವಾಲನ್ನೆಸೆದವರು ಈ ಮೂವರು. ವಿಶ್ವವು ಸಾಂತ ಮತ್ತು ಸೀಮಿತ ಎಲ್ಲೆಗಳುಳ್ಳದ್ದು ಎಂಬ ಧಾರ್ಮಿಕ ನಂಬಿಕೆಗೆ ಮೊದಲ ಆಘಾತ ಬಂದಿದ್ದು ಕೋಪರ್ನಿಕಸ್‌ನ ಸಿದ್ಧಾಂತದಿಂದ. ವಿಶ್ವ ಸೀಮಾತೀತವಾಗಿದ್ದು ಯಾವ ಎಲ್ಲೆಗಳೂ ಇಲ್ಲದ್ದು ಹಾಗೂ ಅನಂತ ಆಕಾಶ ಅಥವಾ ಅವಕಾಶವನ್ನು ಹೊಂದಿದ್ದು ಎಂದು ಅವನು ಪ್ರತಿಪಾದಿಸಿದ್ದು ಕ್ರೈಸ್ತ ಶ್ರದ್ಧಾಳುಗಳಿಗೆ ಜೀರ್ಣಿಸಿಕೊಳ್ಳಲಾಗದ ವಿಷಯವಾಗಿ ಪರಿಣಮಿಸಿತು. ಕೋಪರ್ನಿಕಸ್‌ನ ಸಿದ್ಧಾಂತಕ್ಕೆ ಆಧುನಿಕ ಸ್ವರೂಪ ಕೊಟ್ಟವನು ಕೆಪ್ಲರ್, ಆದರೆ ಅದನ್ನು ಖಚಿತಪಡಿಸಿದವನು ಗೆಲಿಲಿಯೊ. ಆದರೆ ಈ ಮೂವರು ತತ್ತ್ವಶಾಸ್ತ್ರಜ್ಞರಾಗಿರಲಿಲ್ಲ, ಇವರು ಖಗೋಳ ವಿಜ್ಞಾನಿಗಳಾಗಿದ್ದರು. ಹೀಗಾಗಿ ತಾವು ಪ್ರತಿಪಾದಿಸಿದ ವಿಶ್ವರಚನೆಯಲ್ಲಿ ದೇವರ ಸ್ಥಾನವನ್ನು ನಿರ್ಧರಿಸುವುದು ಇವರ ಉದ್ದೇಶವಾಗಿರಲಿಲ್ಲ. ಸೃಷ್ಟಿಯಲ್ಲಿ ದೇವರ ಕೈವಾಡವನ್ನು ಪ್ರತಿಪಾದಿಸುವ ಅರಿಸ್ಟಾಟಲನ ಸಿದ್ಧಾಂತವನ್ನು ಮೀರಿಹೋದುದಕ್ಕಾಗಿ ಇವರು ಪುರೋಹಿತಶಾಹಿಯ ಕೆಂಗಣ್ಣಿಗೂ ಗುರಿಯಾಗಬೇಕಾಯಿತು.

೩. ಮುಂದಿನ ಯುಗ **ಭೌತಶಾಸ್ತ್ರಜ್ಞರ ಯುಗ**. ನ್ಯೂಟನ್ ಮತ್ತು ಐನ್‌ಸ್ಟೈನ್ ಈ ಯುಗದ ಇಬ್ಬರು ಅನಭಿಷಿಕ್ತ ದೊರೆಗಳು. ನ್ಯೂಟನ್ನನು ಕಲ್ಪಿಸಿದ್ದು ಕೆಲವು ಭೌತಿಕ ನಿಯಮಗಳಿಗೆ ಒಳಪಟ್ಟು ನಡೆಯುವ ವಿಶ್ವವನ್ನು. ಆದರೆ ಆ ನಿಯಮಗಳಿಗೆ ಒಳಪಟ್ಟು ನಡೆಯುವ ಭೌತಿಕ ಕ್ರಿಯೆಗಳಿಗೆ ಆಧಾರಗಳಾದ ಕಾಲ–ದೇಶಗಳು ಸಾಪೇಕ್ಷವಾದವು ಮತ್ತು ಈ ಜಗತ್ತಿನ ಪ್ರತಿಯೊಂದು ಘಟನೆಯನ್ನೂ ನಾವು ಅರ್ಥ ಮಾಡಿಕೊಳ್ಳುವುದು ಇತರ ಘಟನೆಗಳಿಗೆ ಹೋಲಿಸಿಯೇ ಎಂದು ತೋರಿಸಿಕೊಟ್ಟವರು ಐನ್‌ಸ್ಟೈನ್.

ನಂತರ ಬಂದ ಕ್ವಾಂಟಮ್ ಭೌತಶಾಸ್ತ್ರ ವಿಭಾಗವು, ಅಣುಗಳಲ್ಲಿರುವ ಎಲೆಕ್ಟ್ರಾನ್, ನ್ಯೂಟ್ರಾನ್ ಮತ್ತು ಪ್ರೋಟಾನುಗಳು ಹಾಗೂ ಮತ್ತಿತರ ಸೂಕ್ಷ್ಮ ಪದಾರ್ಥಗಳ ವಿಷಯದಲ್ಲಿ ಸಂಭಾವ್ಯತಾ ನಿಯಮಗಳು ಪ್ರಸ್ತುತವಾಗುತ್ತವೆ ಎಂದು ಹೇಳುತ್ತದೆ. ಅಂದರೆ, ಆ ಮೂಲ ಕಣಗಳ ಚಲನೆಯನ್ನು ಹೀಗೆಯೇ ಎಂದು ನಿರ್ದಿಷ್ಟವಾಗಿ ಲೆಕ್ಕಾಚಾರ ಮಾಡಿ ಹೇಳಲು ಸಾಧ್ಯವಿಲ್ಲ. ಆದರೂ, ಈ ವಿಶ್ವದ ಎಲ್ಲ ಘಟನೆಗಳಿಗೂ ಅನ್ವಯವಾಗುವ, ಎಲ್ಲ ಕ್ರಿಯೆಗಳನ್ನೂ ವಿವರಿಸಬಲ್ಲ ಸಾಮಾನ್ಯ ನಿಯಮವೊಂದನ್ನು ಶೋಧಿಸಲು ಐನ್‌ಸ್ಟೈನ್ ಪ್ರಯತ್ನಿಸಿದರು. ಆದರೆ ಈ ಪ್ರಯತ್ನದಲ್ಲಿ ಅವರು ಯಶಸ್ವಿಯಾಗಲಿಲ್ಲ.

### ಭಾರತೀಯ ದಾರ್ಶನಿಕ ಪರಿಕಲ್ಪನೆಗಳು

ಋಗ್ವೇದದಲ್ಲಿ ಬರುವ ವಿಶ್ವಕಲ್ಪನೆಯು ಎರಡು ಮುಖಗಳನ್ನು ಒಳಗೊಂಡಿದೆ. ಒಂದು **ದೈವಿಕ ಕಲ್ಪನೆ**. ಎರಡನೆಯದು **ತಾತ್ತ್ವಿಕ ಕಲ್ಪನೆ**. ವೈದಿಕ ನಂಬಿಕೆಗಳ ಪ್ರಕಾರ, ವಿಶ್ವದಲ್ಲಿ ಮೂರು ಭಾಗಗಳಿವೆ – ಪೃಥ್ವಿ, ವಾಯು ಮತ್ತು ಆಕಾಶ. ವಿಶ್ವವನ್ನು ಸಾಮಾನ್ಯವಾಗಿ **ದ್ಯಾವಾಪೃಥಿವೀ**– ಆಕಾಶ ಮತ್ತು ಭೂಮಿಗಳ ಸಂಬಂಧದಲ್ಲಿ ವಿವರಿಸ ಲಾಗುತ್ತಿತ್ತು. ಅದಿತಿಯನ್ನು ಸೃಷ್ಟಿಯ ಸ್ತ್ರೀತತ್ತ್ವವಾಗಿಯೂ, ದಕ್ಷನನ್ನು ಪುರುಷ ತತ್ತ್ವವಾಗಿಯೂ ಪರಿಗಣಿಸಲಾಗಿತ್ತು. ಹಾಗೆಯೇ ಸೃಷ್ಟಿಯ ಮೂಲವೆಂದು ಪರಿಭಾವಿಸಿದ ಆದಿಪುರುಷನನ್ನು ಕೂಡ ವೇದದಲ್ಲಿ ಹಲವಾರು ಕಡೆ ಬಣ್ಣಿಸಲಾಗಿದೆ. ಪುರುಷಸೂಕ್ತದಲ್ಲಿ ಕಂಡು ಬರುವ ಮುಖ್ಯ ಅಂಶವೆಂದರೆ, ಸೃಷ್ಟಿಯು ಭಗವಂತನ ಮೂರ್ತ ಅಂಶವಷ್ಟೆ, ಭಗವಂತನ ಅಮೂರ್ತವಾದ ಭಾಗವು ಈ ಮೂರ್ತ ರೂಪಕ್ಕಿಂತ ಅದೆಷ್ಟೋ ವಿಸ್ತಾರವಾಗಿದೆ ಎಂಬ ಅಂಶ. ಇದು ಭಗವತ್ತತ್ತ್ವದ ಅನಂತತೆಯನ್ನೂ ಅಪ್ರಮೇಯತೆಯನ್ನೂ ಸೂಚಿಸುತ್ತದೆ.

ಹಾಗೆಯೇ, ಭಗವಂತನನ್ನು **ವಿಶ್ವಕರ್ಮ** – ವಿಶ್ವದ ಕರ್ತಾರ, **ಪ್ರಜಾಪತಿ** – ವಿಶ್ವದ ಜನಕ ಎಂದೂ ವೇದಗಳಲ್ಲಿ ಬಣ್ಣಿಸಲಾಗಿದೆ. ಮುಂದೆ ಸೃಷ್ಟಿಕರ್ತ ಬ್ರಹ್ಮನೆಂಬ ದೇವತೆಯ ಕಲ್ಪನೆಗೆ ಇದೇ ಮೂಲವಾಗಿರಬೇಕು. ವಿಶ್ವಮೂಲವನ್ನು **ಹಿರಣ್ಯಗರ್ಭ** (ಬಂಗಾರದ ಮೊಟ್ಟೆ) ರೂಪದಲ್ಲಿಯೂ ಕಲ್ಪಿಸಿರುವುದನ್ನು ನಾವು ಕಾಣಬಹುದು. ಈ ಮೂರೂ ಭಾವನೆಗಳು ಮುಂದೆ ಉಪನಿಷತ್ತುಗಳಲ್ಲಿ ತಾತ್ತ್ವಿಕ ರೂಪವನ್ನು ಪಡೆದವು.

ಅದಲ್ಲದೆ, ವಿಶ್ವವು ಬೇರಾವ ಬಾಹ್ಯ ಸಾಧನವೂ ಇಲ್ಲದೆ ಭಗವಂತ ನಿಂದಲೇ ಒಡಮೂಡಿದ್ದೆಂದು ಹೇಳುವ ತಾತ್ತ್ವಿಕ ಚಿಂತನೆಯ ಮಂತ್ರ ಗಳನ್ನೂ ಋಗ್ವೇದದಲ್ಲಿ ಕಾಣಬಹುದು. ಅವುಗಳ ಕಾವ್ಯಮಯ ಅಭಿವ್ಯಕ್ತಿಯ ಹಿಂದಿರುವ ತಾತ್ತ್ವಿಕ ಅನುಭಾವವನ್ನು ವಿದ್ವಾಂಸರು ಗುರುತಿಸಿದ್ದಾರೆ; ಸತ್ಯ ಮತ್ತು ಸೌಂದರ್ಯಗಳ ಅಪೂರ್ವ ಸಂಗಮ ಇಲ್ಲಿದೆ ಎಂದು ಹೊಗಳಿದ್ದಾರೆ. ಡಾ. ವಿಂಟರ್‌ನಿಜ್ ಪ್ರಕಾರ, ಋಗ್ವೇದದ ಈ ತಾತ್ತ್ವಿಕ ಮಂತ್ರಗಳೇ ಮುಂದೆ ಉಪನಿಷತ್ತುಗಳಲ್ಲಿ ಬರುವ ತತ್ತ್ವಜಿಜ್ಞಾಸೆಯ ಆಕರಗಳಾಗಿವೆ. ಯಜ್ಞವಿಧಾನಕ್ಕೆ ಸಹಕಾರಿ ಯಾಗಿ ಇದೇ ರೀತಿಯ ಕಲ್ಪನೆಗಳನ್ನು ಬ್ರಾಹ್ಮಣಗಳಲ್ಲಿ ಕೊಟ್ಟಿರುವುದನ್ನು ನಾವು ಕಾಣಬಹುದು.

ಮೇಲಿನ ದೇವತಾಕಲ್ಪನೆಗಳೇ ಒಂದು ನಿರಾಕಾರ ನಿರ್ಗುಣ ತತ್ತ್ವದ ರೂಪವನ್ನು ಪಡೆಯುವುದನ್ನು ಉಪನಿಷತ್ತುಗಳಲ್ಲಿ ಗುರುತಿಸ ಬಹುದು. **ಸತ್, ಬ್ರಹ್ಮ, ಆತ್ಮ** – ಇವೆಲ್ಲ ಆ ತತ್ತ್ವದ ವಿವಿಧ ಹೆಸರುಗಳು. ಕರ್ಮಕಾಂಡ ಭಾಗದಲ್ಲಿ ಕಂಡುಬರುವಂತೆಯೆ, ಇಲ್ಲಿಯೂ ಜಗತ್ತಿನ ಸೃಷ್ಟಿಯ ನಾನಾ ಬಗೆಗಳನ್ನು ಕಾಣಬಹುದು. ಉಪನಿಷತ್ತಿನ ಸೃಷ್ಟಿತತ್ತ್ವವು ಮೂಲತಃ ಎರಡು ವಿಧವಾಗಿದೆ: **ಭೌತಿಕ ಸೃಷ್ಟಿ, ದೈವಿಕ ಸೃಷ್ಟಿ**. ಭೌತಿಕ ಸೃಷ್ಟಿಯಲ್ಲಿ, ಆತ್ಮನಿಂದ ಆಕಾಶ, ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ನೀರು, ನೀರಿನಿಂದ ಪೃಥ್ವಿ, ಪೃಥ್ವಿಯಿಂದ ಗಿಡಮರಗಳು, ಅವು ಕೊಡುವ ಆಹಾರದಿಂದ ಜೀವ ರಾಶಿಗಳು – ವಿವಿಧ ಉಪನಿಷತ್ತುಗಳಲ್ಲಿ ಸೃಷ್ಟಿಕ್ರಮವನ್ನು ಹೆಚ್ಚೂ ಕಡಮೆ ಹೀಗೆ ವಿವರಿಸಲಾಗಿದೆ.

ದೈವಿಕ ಅಥವಾ ಆಧ್ಯಾತ್ಮಿಕ ಸೃಷ್ಟಿಪ್ರಕಾರವು ಮೇಲಿನ ಭೌತಸೃಷ್ಟಿ ಕ್ರಮಕ್ಕೆ ವಿರುದ್ಧವಾಗಿರದೆ, ಪೂರಕವಾಗಿದೆ. ಅದರಲ್ಲಿ, ಚೈತನ್ಯದಿಂದ ಜಡಪದಾರ್ಥವು ಮೊಳೆಯುವ. ನಂತರ ಅದು ಜಡದ ಸಹಭಾಗಿ ಯಾಗುವ ಅತ್ಯಂತ ವಿಶಿಷ್ಟ ಪ್ರಕ್ರಿಯೆಯನ್ನು ನಾವು ಕಾಣಬಹುದು. ಈ ವಿಷಯದಲ್ಲಿ ಎರಡು ಪ್ರಕಾರದ ವಿವರಣೆಗಳನ್ನು ನಾವು ಕಾಣುತ್ತೇವೆ. ಭಗವಂತನು ತಾನು ಬಹುವಾಗುವೆನು ಎಂದು ಯೋಚಿಸಿ, ತಾನೇ ಅನೇಕ ರೂಪಗಳಲ್ಲಿ ಕಾಣಿಸಿಕೊಂಡನು ಎಂಬುದು ಒಂದು ಬಗೆಯ ವಿವರಣೆ. ಈಗಾಗಲೇ ಸೃಷ್ಟಿಯಾಗಿರುವ ಜಡ ಜಗತ್ತು ಅಚೇತನವಾಗಿ ಬಿದ್ದಿರುವಾಗ, ಭಗವಂತನು ಅದರೊಳಗೆ ಪ್ರವೇಶಿಸಿ ಚೈತನ್ಯಯುಕ್ತವನ್ನಾಗಿ ಮಾಡಿದನು ಎನ್ನುವುದು ಇನ್ನೊಂದು ವಿವರಣೆ. ಈ ವಿವರಣೆಗಳು ಕೂಡ ಒಂದಕ್ಕೊಂದು ವಿರುದ್ಧವಲ್ಲ. ಚೈತನ್ಯವೇ ಜಡಜಗತ್ತಾಗಿ ಪರಿಣಮಿಸಿತು. ಅದಕ್ಕೆ ತನ್ನದೇ ಆದ ಚಲನಶಕ್ತಿ ಇಲ್ಲದಿದ್ದರಿಂದ ಚೈತನ್ಯವು ಅದರಲ್ಲಿ ಪ್ರವೇಶಿಸಿ, ಕಾರ್ಯಶಕ್ತಿ ಅಥವಾ ಚಲನಶಕ್ತಿಯನ್ನು ತುಂಬಿತು. ಉಪನಿಷತ್ತುಗಳಲ್ಲಿ ಕಂಡುಬರುವ ಈ ಎರಡೂ ಬಗೆಯ ವಿವರಗಳು ತಿಳಿಸುವುದಿಷ್ಟೆ: ಶುದ್ಧ ಜಡ ಪದಾರ್ಥವು ಜಗತ್ತಾಗಿ ಪರಿಣಮಿಸಲು ಸಾಧ್ಯವಿಲ್ಲ; ಶುದ್ಧ ಚೈತನ್ಯವೂ ಜಗತ್ತಾಗಿ ಪರಿಣಮಿಸಲು ಸಾಧ್ಯವಿಲ್ಲ. ಇವೆರಡರ ಮಿಶ್ರಣ ಮಾತ್ರವೇ ಜಗತ್ತಾಗಿ ಪರಿಣಮಿಸಬಲ್ಲದು ಎಂದು.

> **ಜಡವೆಂಬುದೇನು? ಸೃಷ್ಟಿಯಲಿ ಚೇತನ ಸುಪ್ತಿ**
> **ಅಡಗಿ ನಿದ್ರಿಪುದಲ್ಲಿ ಚೈತನ್ಯದಗ್ನಿ**
> **ಮಿಡಿಯೆ ಪರತತ್ವ ವಿದ್ಯುದ್ದೀಪ್ತಿಯದನಾಗ**
> **ನಡೆವುದದು ಜೀವಿವೊಲು ಮಂಕುತಿಮ್ಮ** – ಡಿ.ವಿ.ಜಿ.

### ಎರಡು ವಾದಗಳು

ಈ ಬಗೆಯ ಮಿಶ್ರಣ ತಾರ್ಕಿಕವಾಗಿ ಸಮರ್ಥನೀಯವೇ ಎಂಬುದು ಶತಶತಮಾನಗಳಿಂದ ದಾರ್ಶನಿಕರ ಮುಂದೆ ಇದ್ದ ಪ್ರಶ್ನೆ. ಹಾಗೆಂದೇ ಸೃಷ್ಟಿಕ್ರಮದ ಈ ಎರಡು ವಾದಗಳು ಹುಟ್ಟಿಕೊಂಡವು. ಒಂದು **ಪರಿಣಾಮ ವಾದ**. ಇನ್ನೊಂದು **ವಿವರ್ತ ವಾದ**. ಅದಲ್ಲದೆ ಸೃಷ್ಟಿಯೇ ನಡೆದಿಲ್ಲವೆಂಬ ಬೌದ್ಧರ **ಶೂನ್ಯ ವಾದವೂ** ಇತ್ತು. ಪರಿಣಾಮ ವಾದವು ಉಪನಿಷತ್ತುಗಳಲ್ಲಿ ಮೇಲುನೋಟಕ್ಕೆ ಹೇಳಿದ ಹಾಗೆ ಭಗವಂತನಿಂದ ಜಗತ್ತು ಉತ್ಪನ್ನವಾಯಿತೆಂದು ಹೇಳುತ್ತದೆ. ದ್ವೈತ ವಾದಿಗಳ ಪ್ರಕಾರ ಜಗತ್ತು ಸತ್ಯ ಮತ್ತು ಭಗವಂತನಿಗಿಂತ ಭಿನ್ನ. ಅಂತರ್ಯಾಮಿಯಾಗಷ್ಟೆ ಭಗವಂತ ಇರುತ್ತಾನೆ. ವಿಶಿಷ್ಟಾದ್ವೈತಿಗಳು ಸ್ವಲ್ಪ ಭಿನ್ನವಾದ ವಿವರಣೆ ಕೊಡುತ್ತಾರೆ. ಅವರ ಪ್ರಕಾರ ಜಡ ಮತ್ತು ಚೈತನ್ಯಯುಕ್ತವಾದ ಜಗತ್ತು ಭಗವಂತನ ಶರೀರಪ್ರಾಯವಾದುದು. ಅವು ಸೃಷ್ಟಿಗೆ ಮೊದಲು ಬೀಜರೂಪದಲ್ಲಿದ್ದು, ನಂತರ ವಿಕಸಿತವಾಗಿವೆ; ಭಗವಂತನಿಗಿಂತಲೂ ಅಭಿನ್ನವಾಗಿದ್ದರೂ ಅಂಶ–ಅಂಶಿ, ಅಂಗ–ಅಂಗಿ, ಶರೀರ–ಶರೀರಿಗಳ ವಿಶಿಷ್ಟ ಸಂಬಂಧ ಹೊಂದಿವೆ. ಹಾಗೆಂದೇ ಈ ವಾದವನ್ನು ವಿಶಿಷ್ಟ–ಅದ್ವೈತ ಎಂದು ಕರೆಯುವುದು.

ಇದಕ್ಕಿಂತ ವಿಲಕ್ಷಣವಾದ್ದು ಅದ್ವೈತಿಗಳು ಪ್ರತಿಪಾದಿಸುವ **ವಿವರ್ತ ವಾದ**. ಇದರ ಪ್ರಕಾರ ವಿರುದ್ಧ ಧರ್ಮಗಳನ್ನು ಹೊಂದಿರುವ ಚೈತನ್ಯ

ಮತ್ತು ಜಡ ಪದಾರ್ಥಗಳ ಸಮೂಹಾಗಿತ್ತ ತಾರ್ಕಿಕವಾಗಿ ದುಸ್ಸಾಧ್ಯ. ಹೀಗಾಗಿ, ಅವರು ಜಗತ್ತಿನ ಬಗ್ಗೆ ಕೊಡುವ ವಿವರಣೆ ಅದು ಬರೀ ತೋರಿಕೆಯೆಂದು. ಮಂದ ಬೆಳಕಿನಲ್ಲಿ ಹಗ್ಗ ಹಗ್ಗವಾಗಿಯೇ ಇದ್ದುಕೊಂಡು, ಹಾವಾಗಿ ತೋರುವುದಿಲ್ಲವೇ! ಹಾಗೆಯೇ ಚೈತನ್ಯವು ತನ್ನ ಸ್ವರೂಪವನ್ನು ಬಿಟ್ಟುಕೊಡದೆ, ಜಗತ್ತಾಗಿ ತೋರುತ್ತದೆ. ಇನ್ನೊಂದು ವಿಚಾರವೆಂದರೆ, ಜಗತ್ತಿನ ವಿಷಯದಲ್ಲಷ್ಟೆ, ಜಡ ವಸ್ತುವಿಗೆ ಅಸ್ತಿತ್ವ. ಜಗತ್ತೇ ತೋರಿಕೆಯೆಂದಾದ ಮೇಲೆ, ಜಡ ವಸ್ತುವಿಗೆ ಸತ್ಯತೆಯೇ ಇಲ್ಲ. ಚೈತನ್ಯವೇ ಜಡರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಅಷ್ಟೆ. ಹೀಗಾಗಿ ಸೃಷ್ಟಿಯೆಂಬುದು ತಪ್ಪು ಗ್ರಹಿಕೆಯ ಪರಿಣಾಮ. ಪಾರಮಾರ್ಥಿಕ ದೃಷ್ಟಿಯಿಂದ – **ನೇಹ ನಾನಾಸ್ತಿ ಕಿಂಚನ** – ಚೈತನ್ಯವನ್ನು ಬಿಟ್ಟು ಬೇರೆ ಯಾವ ಎರಡನೆಯ ವಸ್ತುವೂ ಇಲ್ಲ.

### ಉಪಸಂಹಾರ

ಹೀಗೆ ಜಗತ್ತಿನ ವಿಷಯದಲ್ಲಿ ಅನೇಕ ಪಾಶ್ಚಾತ್ಯ ಮತ್ತು ವೈದಿಕ ಸಿದ್ಧಾಂತಗಳು ಮೈತಳೆದಿವೆ. ಕೆಲ ಸಿದ್ಧಾಂತಗಳು ಜಗತ್ತಿನ ಸೃಷ್ಟಿ ಮತ್ತು ನಿರ್ವಹಣೆಗಳಲ್ಲಿ ದೇವರ ಪಾತ್ರವನ್ನು ನಿರಾಕರಿಸಿದ್ದರೆ, ಕೆಲವು ವಿಭಿನ್ನ ಪ್ರಕಾರಗಳಲ್ಲಿ ದೇವರ ಪಾತ್ರವನ್ನು ಒಪ್ಪಿಕೊಂಡಿವೆ. ಆದರೆ ಜಗತ್ತಿನ ರಹಸ್ಯ ಇನ್ನೂ ಸಮಾಧಾನಕರವಾಗಿ ಅನಾವರಣಗೊಂಡಿಲ್ಲವೆಂದೇ ಹೇಳಬೇಕು (ಎಂದಾದರೂ ಆದೀತೆ?!).

ಜಡವಸ್ತುಗಳ ಸುಸಜ್ಜಿತ ರಚನೆ ಹೇಗೆ ತಾನೆ ಸಾಧ್ಯವಾಯಿತು? ಕೆಲವು ಪದಾರ್ಥಗಳು ಯಾವ ನಿಯಮಕ್ಕೂ ಬದ್ಧವಾಗದೆ ವರ್ತಿಸುವುದು ಹೇಗೆ? – ಈ ಪ್ರಶ್ನೆಗಳಿಗೆ ವಿಜ್ಞಾನ ಇನ್ನೂ ಸಮರ್ಪಕ ಉತ್ತರ ಕೊಟ್ಟಿಲ್ಲ. ಅದಲ್ಲದೆ, ಚೈತನ್ಯವು ಜಗತ್ತಿನ ರೂಪದಲ್ಲಿ ಹೇಗೆ ತಾನೇ ಕಾಣಿಸಿಕೊಂಡಿತು? ದೇವರನ್ನು ಕೇವಲ ಚೈತನ್ಯವೆಂದು ಪರಿಗಣಿಸಬೇಕೆಂದಾದರೆ, ಸಗುಣ ಸಾಕಾರ ದೇವರ ಕಲ್ಪನೆ ಸುಳ್ಳೇ? ಜಗತ್ತು ಮತ್ತು ದೇವರುಗಳ ಸಂಬಂಧದಲ್ಲಿ ವ್ಯಕ್ತಿಯ ನೈಜ ಸ್ವರೂಪ ಮತ್ತು ಪಾತ್ರವೇನು? ತಾತ್ತ್ವಿಕವಾಗಿ ಒಬ್ಬ ವ್ಯಕ್ತಿ ತನ್ನನ್ನು ಜಡವೆಂದು ಪರಿಗಣಿಸಬೇಕೋ ಇಲ್ಲಾ ಚೈತನ್ಯವೆಂದು ಪರಿಗಣಿಸಬೇಕೋ ಅಥವಾ ಜಡಚೈತನ್ಯಗಳ ಮಿಶ್ರಣವೆಂದೋ – ಈ ಎಲ್ಲ ಪ್ರಶ್ನೆಗಳು ಆಧ್ಯಾತ್ಮಿಕ ಕ್ಷೇತ್ರದಲ್ಲಿಯೂ ಉಳಿಯುತ್ತವೆ. ಜೀವಿಯೊಬ್ಬನ ಮತ್ತು ಸಾಕಾರ ಈಶ್ವರನ ತಾತ್ತ್ವಿಕ ಭೂಮಿಕೆಗಳನ್ನು ಅಧ್ಯಯನ ಮಾಡಿದಾಗ ಮಾತ್ರ ಮೇಲಿನ ಪ್ರಶ್ನೆಗಳಿಗೆ ಉತ್ತರ ದೊರಕುತ್ತದೆ. ಆ ಪ್ರಯತ್ನವನ್ನು ಮುಂದಿನ ಸಂಚಿಕೆಗಳಲ್ಲಿ ಮಾಡಲಾಗುವುದು. **(ಮುಂದಿನ ತಿಂಗಳು: ಜೀವಿಯ ರಹಸ್ಯ)**

---

## ಭಗವಂತನನ್ನು ಅರಸುತ್ತ

### ಆಧ್ಯಾತ್ಮಿಕ ಜೀವನದ ನಾಲ್ಕು ಹಂತಗಳು

ಸ್ವಾಮಿ ಯತೀಶ್ವರಾನಂದ

**(ಹಿಂದಿನ ಸಂಚಿಕೆಯಲ್ಲಿ: ಆಧ್ಯಾತ್ಮಿಕ ಜೀವನದಲ್ಲಿ ಮೊದಲ ಹಂತವೆಂದರೆ, ಆಚಾರಸಹಿತ ಪೂಜಾವಿಧಿ. ಎರಡನೆಯ ಹಂತವೆಂದರೆ, ಪ್ರಾರ್ಥನೆ ಮತ್ತು ಜಪಗಳ ಮೂಲಕ ಭಗವಂತನನ್ನು ಆರಾಧಿಸುವುದು.)**

ಆಧ್ಯಾತ್ಮಿಕ ಜೀವನದ ಮೂರನೆಯ ಹಂತವೆಂದರೆ **ಧ್ಯಾನ**. ಇದರಲ್ಲಿ ದೇವತಾಮೂರ್ತಿಯ ಚಿತ್ರವಾಗಲೀ ಅಥವಾ ಶಬ್ದಸಂಕೇತವಾಗಲೀ ನಮಗೆ ಬೇಕಾಗಿಬರುವುದಿಲ್ಲ. ಈ ಸ್ಥಿತಿಯಲ್ಲಿ ಭಗವಂತನೆಡೆಗೆ ಸರ್ವದಾ ನಮ್ಮೆಲ್ಲ ಆಲೋಚನೆಗಳೂ ಹರಿಯುತ್ತಿರುತ್ತವೆ. ಆಗ ನಮ್ಮ ಮನಸ್ಸಿನಲ್ಲಿ ದಿವ್ಯತೆಯ ಜೀವಂತ ಸಾನ್ನಿಧ್ಯವನ್ನು ನಾವು ಯಾವಾಗಲೂ ಅನುಭವಿಸುತ್ತಿರುತ್ತೇವೆ. ಶಬ್ದಸಂಕೇತವಾದ ಓಂಕಾರವೂ ಕೂಡ ಮರೆಯಾಗುವುದು; ಭಗವತ್ಸಾನ್ನಿಧ್ಯ ಮಾತ್ರವೇ ಉಳಿಯುವುದು.

ಆಧ್ಯಾತ್ಮಿಕ ಜೀವನದ ಉನ್ನತಸ್ಥಿತಿಯು **ಆತ್ಮ-ಪರಮಾತ್ಮರ ನಡುವೆ ಐಕ್ಯಭಾವವನ್ನು** ಅನುಭವಿಸಿದಾಗ ನಮಗೆ ಲಭ್ಯವಾಗುವುದು. ಆ ಅನುಭವದಲ್ಲಿ ಪ್ರತ್ಯೇಕತೆಯ ಭಾವವಿರುವುದಿಲ್ಲ. ಇದು ಅನಂತತತ್ತ್ವದ ಸಾಕ್ಷಾತ್ಕಾರದ ಹಂತವಾಗಿದೆ. ಸಾಧಕನು ತನ್ನ ಆಧ್ಯಾತ್ಮಿಕ ಜೀವನದ ಸಮಯದಲ್ಲಿ ಹಾದು ಹೋಗಬೇಕಾದ ನಾಲ್ಕು ಹಂತಗಳಿವು.

ಮೊದಲು ನಾವು ಸಾಧನೆಯ ಯಾವ ಹಂತದಲ್ಲಿದ್ದೇವೆ ಎಂದು ತಿಳಿದುಕೊಳ್ಳಬೇಕು. ನಂತರವಷ್ಟೇ ಮುಂದಿನ ಹಂತಕ್ಕೆ ಹೋಗಲು ಪ್ರಯತ್ನಪಡಬೇಕು. ಮೊದಲ ಹಂತಕ್ಕೆ ಮಾತ್ರ ನಮ್ಮ ಅರ್ಹತೆ ಇದ್ದರೆ, ನಾವು ಅವಸರಪಟ್ಟು ಕಡೆಯ ಹಂತಕ್ಕೆ ನೇರವಾಗಿ ಜಿಗಿಯಬಾರದು. ಇದರಿಂದ ದುಷ್ಫಲಗಳು ಉಂಟಾಗುತ್ತವೆ. ನಾವು ಮನೆಯೊಂದರ ಛಾವಣಿಯನ್ನು ತಲುಪಬೇಕಾದರೆ, ಅದರ ಮೆಟ್ಟಿಲುಗಳನ್ನು ಒಂದೊಂದಾಗಿ ಏರಬೇಕಾಗುತ್ತದೆ. ಒಂದೇ ಏಟಿಗೆ ಛಾವಣಿಯ ಮೇಲೆ ಜಿಗಿಯಲು ಹೋದರೆ, ಕಾಲು ಮುರಿದುಕೊಳ್ಳಬೇಕಾಗುತ್ತದೆ!

ಆರಂಭದ ಹಂತದಲ್ಲಿರುವ ಸಾಧಕನಿಗೆ ಭಗವಂತನ ವಿಗ್ರಹವನ್ನು ಪುಷ್ಪ, ಸುಗಂಧ ದ್ರವ್ಯ ಮತ್ತು ಗಂಧಗಳಿಂದ ಪೂಜಿಸುವುದು ಹೆಚ್ಚಿನ ಆನಂದವನ್ನು ತರುವುದು. ಅದಲ್ಲದೆ, ಜಪಸಾಧನೆಗಾಗಿ ಅಭಿರುಚಿಯನ್ನೂ ಮನಸ್ಸಿನಲ್ಲಿ ಮೂಡಿಸುವುದು. ಜಪವು ನಿಧಾನವಾಗಿ ಧ್ಯಾನದತ್ತ ಕೊಂಡೊಯ್ಯುವುದು. ನಂತರ ಭಗವಂತನೇ ಮುಂದಿನ ದಾರಿಯನ್ನು ತೋರಿಸುವನು.

ಸಮಾಧಿ ಎರಡು ಬಗೆ: **ನಿರ್ವಿಕಲ್ಪ** ಮತ್ತು **ಸವಿಕಲ್ಪ**. ಶ್ರೀರಾಮಕೃಷ್ಣರು ತಮ್ಮ ಮೊದಲ ದರ್ಶನದಲ್ಲಿ ಜಗನ್ಮಾತೆಯನ್ನು ಕಂಡರು. ಬಹಳ ಹೊತ್ತಿನವರೆಗೆ ಬಾಹ್ಯಪ್ರಜ್ಞೆಯಿಲ್ಲದೆ ಇದ್ದರು. ಇದು **ಸವಿಕಲ್ಪ ಸಮಾಧಿ**. ಅಂದರೆ, ಸಗುಣ ಅಥವಾ ಸ್ವರೂಪವುಳ್ಳ ಭಗವಂತನ ರೂಪದ ದರ್ಶನ: ಇಷ್ಟದೇವತೆಯನ್ನು ಮುಖಾಮುಖಿಯಾಗಿ ನೋಡುವುದು. ಈ ಸ್ಥಿತಿಯಲ್ಲಿ ಅಹಂಕಾರದ ಲವಲೇಶ ಉಳಿದಿರುತ್ತದೆ. ನಿರ್ವಿಕಲ್ಪ ಸಮಾಧಿಯಲ್ಲಿ ಸಾಧಕನು ತನ್ನ ವ್ಯಕ್ತಿತ್ವದ ಅರಿವನ್ನು ಕಳೆದುಕೊಳ್ಳುತ್ತಾನೆ. ದೇವತಾಮೂರ್ತಿಯ ನಾಮ ಮತ್ತು ರೂಪಗಳ ಆಚೆಗೆ ಹೋಗುತ್ತಾನೆ. ಅವನ ಪ್ರಜ್ಞೆಯು ಭಗವತ್‌ಪ್ರಜ್ಞೆಯೊಡನೆ ಸಂಪೂರ್ಣವಾಗಿ ವಿಲೀನವಾಗುತ್ತದೆ.

ಆಧ್ಯಾತ್ಮಿಕ ಜೀವನದ ಆರಂಭದಲ್ಲಿ, ಅಹಂಕಾರದ ದೆಸೆಯಿಂದ ವ್ಯಕ್ತಿಗತ ದೇಹಭಾವನೆಯು ಸಂಪೂರ್ಣ ನಾಶವಾಗಿ, ಇಡೀ ಪ್ರಪಂಚವು ಭಗವಂತನ ಬೆಳಕಿನಿಂದ ತುಂಬಿರುವುದನ್ನು ಕಾಣಲಾಗುವುದಿಲ್ಲ. ನಮ್ಮ ದೇಹವು ಜಡಜಗತ್ತಿಗೆ ಸೇರಿದ್ದು, ಅದಿರುವುದು ಜಗತ್ತಿನ **ಸ್ಥೂಲ ಅಭಿವ್ಯಕ್ತಿಯ ಹಂತದಲ್ಲಿ**. ನಮ್ಮ ಮನಸ್ಸು ಮತ್ತು ಬುದ್ಧಿಗಳು ಹಾಗೂ ಅವುಗಳಿಂದ ಹೊರಬರುವ ಆಲೋಚನೆಗಳು ಮತ್ತು ಭಾವನೆಗಳು **ಸೂಕ್ಷ್ಮ ಹಂತದಲ್ಲಿ** ಇರುತ್ತವೆ. ದೇಹಪ್ರಜ್ಞೆಯಾಗಲೀ, ಆಲೋಚನೆ ಮತ್ತು ಭಾವನೆಗಳಾಗಲೀ **ನಿರ್ವಿಕಲ್ಪ ಸಮಾಧಿಯ** ಸ್ಥಿತಿಯಲ್ಲಿ ಇರುವುದಿಲ್ಲ. ಈ ಸ್ಥಿತಿಯು ಭಗವಂತನೊಡನೆ ಪರಿಪೂರ್ಣ ಐಕ್ಯತೆಯ ಸ್ಥಿತಿಯಾಗಿದೆ. ಆ ಮೂಲಕ ಅರಿವು ಅಥವಾ ಪ್ರಜ್ಞೆಯು ಏರಬಲ್ಲ ಅತ್ಯಂತ ಉನ್ನತ ಸ್ಥಿತಿಯಾಗಿದೆ.

**(ಮುಂದಿನ ತಿಂಗಳು: ದಿವ್ಯತೆಯು ಅಭಿವ್ಯಕ್ತವಾಗುವ ವಿವಿಧ ನೆಲೆಗಳು)**